# ಒದುಗರ ಒಡಲಾಳದ ಅಭಿಮತ

## ಕವಿ ಮನಸು

### ಹಂಪಿ ಟೈಮ್ಸ್‌ಗೆ ವರ್ಷದ ಹರ್ಷ

ಹಂಪಿ ಟೈಮ್ಸ್ ಗೆ ಇಂದಿಗೆ ಒಂದು ವರ್ಷ
ತುಂಬಲಿ ಪತ್ರಿಕೆಯು ಪ್ರತಿದಿನ ಹೊಸ ಹರ್ಷ
ಬಿತ್ತರಿಸುತ್ತದೆ ರಾಜ್ಯದ ಎಲ್ಲೆಡೆಯ ಸುದ್ದಿ
ಪಡೆಯಬಹುದು ಹಲವು ಜ್ಞಾನದ ಸಿದ್ಧಿ

ಪತ್ರಿಕೆ ನೀಡುತ್ತದೆ ಬಾಳಿಗೆ ಬೆಳಕಿನ ಹಾದಿ
ಕ್ರೀಡೆ,ರಾಜಕೀಯ ವಿಚಾರ ತಿಳಿಸುವ ಬುನಾದಿ
ಕವಿಗಳ ಕಲ್ಪನೆಗೆ ಇದೆ ಇಲ್ಲಿ ಕವಿ ಮನಸು
ನಿತ್ಯ ಪಂಚಾಂಗವನ್ನು ಅರಿಯಬಹುದು ತುಸು

ಅಚ್ಚರಿ ಮೂಡಿಸುವ ವಿಜ್ಞಾನದ ಸಂಗತಿ
ಪ್ರಸ್ತುತಪಡಿಸುತ್ತದೆ ಶಿಕ್ಷಣದ ಸ್ಥಿತಿಗತಿ
ಲೇಖಕರ ಲೇಖನಿಯಿಂದ ಹರಿದ ವಿಚಾರ
ಹಂಪಿ ಟೈಮ್ಸ್ ಪತ್ರಿಕೆ ಉಳಿಯಲಿ ಅಮರ

ಬಸಾಪುರ ಬಸವರಾಜರ ಕನಸಿನ ಕೂಸಿದು
ಓದಿನ ತೃಪ್ತಿ ಅಚ್ಚಳಿಯದೆ ಉಳಿಸುವುದು
ನೂರ್ಕಾಲ ಪತ್ರಿಕೆ, ಆಚರಿಸಲಿ
ಸಂಭ್ರಮೋತ್ಸವ
ಹರಸಲಿ ಪತ್ರಿಕಾ ಬಳಗವನ್ನು ಆ ಪರಶಿವ

– ವಿಜಯಲಕ್ಷ್ಮಿ ನಾಯ್ಕ್
ಬಿಳಿಯೂರು,
ದಕ್ಷಿಣ ಕನ್ನಡ ಜಿಲ್ಲೆ



### ಗುಣಮಟ್ಟ ಹೀಗೆ ಮುಂದುವರಿಯಲಿ



ಹಂಪಿ ಟೈಮ್ಸ್ ಪತ್ರಿಕೆ ಕೇವಲ ಒಂದು ಸುದ್ದಿ ನೀಡುವ ಪತ್ರಿಕೆಯಾಗಿರದೆ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಕೈಪಿಡಿಯೂ ಆಗಿದೆ. ಪತ್ರಿಕೆಯ ಪುಟಗಳಲ್ಲಿ ನಿತ್ಯ ಪ್ರಕಟಗೊಳ್ಳುವ ಅನೇಕ ಲೇಖನಗಳು ಜ್ಞಾನ ಸಂಪತ್ತಿನ ಗಣಿಯಾಗಿದ್ದು, ಬರಹಗಳು ಮನುಕುಲದ ಏಳಿಗೆಗೆ ಪೂರಕವಾಗಿವೆ.ಮುಖಪುಟದಿಂದ ಕೊನೆಯ ಪುಟದ ಕೊನೆಯ ಸಾಲಿನವರೆಗೂ ಅಕ್ಷರಗಳಲ್ಲಿ, ವರದಿಗಳಲ್ಲಿ ಲೇಖನಗಳಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತಿರುವುದು ಪತ್ರಿಕೆಯ ಕಾರ್ಯಕ್ಷಮತೆಗೆ ಸಾಕ್ಷಿಯಾಗಿದೆ. ಈವರೆಗೂ ಅಡೆತಡೆಗಳನ್ನು ದಾಟಿ, ನೋವುಗಳನ್ನು ಮರೆತು ಹಂಪಿ ಟೈಮ್ಸ್ ಪತ್ರಿಕೆ ಜನರಧ್ವನಿಯಾಗಿ ಸಾಗಿದೆ. ಇಂದಿನ ಒಂದು ವರ್ಷದ ಪಯಣ ಶತಮಾನ ತಲುಪಿ ಮುಂದೆ ಸಾಗಲಿ.

– ಶ್ರೀ ಸಿದ್ಧಲಿಂಗ ಶ್ರೀಗಳು ಹೊಸಪೇಟೆ.

### ಕಲ್ಯಾಣ ಕರ್ನಾಟಕದ ಅತ್ಯುತ್ತಮ ಪತ್ರಿಕೆ



ನಮ್ಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಂಪಿ ಟೈಮ್ಸ್ ಅತ್ಯುತ್ತಮ ದಿನಪತ್ರಿಕೆ ಯಾಗಿ ಹೊರ ಹೊಮ್ಮುತ್ತಿದೆ.. ಸಂಪಾದಕರಾದ ಶ್ರೀ ಬಸಾಪುರ ಬಸವರಾಜ್ ರವರ ಶ್ರಮ ಹಾಗೂ ಅವರ ಸಾಮಾಜಿಕ ಕಾಳಜಿ ಈ ಪತ್ರಿಕೆಯ ಯಶಸ್ಸಿಗೆ ಕಾರಣ.. ಮನೆಮಾತಾಗಿರುವ ಹಂಪಿ ಟೈಂಸ್ ಇನ್ನಷ್ಟು ಉತ್ತುಂಗಕ್ಕೇರಲಿ.

– ಮಹಿಮ ರಾಯಚೂರು


### ಸಣ್ಣ ಪತ್ರಿಕೆ ದೊಡ್ಡ ಹೆಜ್ಜೆ



ಕಲ್ಯಾಣ ಕರ್ನಾಟಕದ ನೂತನ ವಿಜಯನಗರ ಜಿಲ್ಲಾ ಕೇಂದ್ರದಿಂದ 'ವಿಜಯನಗರದ ಹೆಮ್ಮೆ' ಎಂಬ ಘೋಷವಾಕ್ಯವನ್ನು ಹೊಂದಿ "ಹಂಪಿ ಟೈಮ್ಸ" ಕನ್ನಡ ದಿನ ಪತ್ರಿಕೆ, ಶ್ರೀ ಬಸಾಪೂರ ಬಸವರಾಜ ಅವರ ಸಂಪಾದಕತ್ವದಲ್ಲಿ ಜನ್ಮತಾಳಿ ಎರಡನೇ ವರ್ಷದಲ್ಲಿ ಕಾಲಿಡುತ್ತಿರುವ ಸದೃಢ ಹೆಮ್ಮೆಯ ಶಿಸು.ಪ್ರಸ್ತುತ ಅತೀ ವೇಗದ ತಾಂತ್ರಿಕತೆಯ ಮಾಧ್ಯಮದ ಯುಗದಲ್ಲಿ, ಮುದ್ರಣ ಮಾದ್ಯಮ, ಅದರಲ್ಲೂ ಸ್ಥಳೀಯ ಸಣ್ಣ ಪತ್ರಿಕೆ, ದೊಡ್ಡ ಹೆಜ್ಜೆಗಳನ್ನಿಡುತ್ತ ಸಾಗುತ್ತಿರುವ ಹೆಮ್ಮೆಯ ಪತ್ರಿಕೆ. ವಸ್ತುನಿಷ್ಠ ವರದಿ, ಸಾಮಾಜಿಕ ಕಳಕಳಿಯ ಲೇಖನ, ಜ್ಞಾನ, ವಿಜ್ಞಾನ, ಕಥೆ, ಕವನ, ಹೀಗೆ ವಿವಿಧ ವಿಷಯಗಳ ಮೂಲಕ "ಹಂಪಿ ಟೈಮ್ಸ್" ತನ್ನನ್ನು ತಾನು ಗುರುತಿಸಿಕೊಂಡು ಎಲ್ಲ ಓದುಗರಿಗೆ ಮೆಚ್ಚುಗೆ ಪಡೆಯುತ್ತ ಧಾಪುಗಾಲು ಹಾಕುತ್ತಿದೆ. ಸಣ್ಣ ಪತ್ರಿಕೆಗಳ ಸಾಲಿನಲ್ಲಿ ಸರ್ವ ಶ್ರೇಷ್ಠ ಯಶಸ್ಸು ಗಳಿಸಲೆಂದು ಹಾರೈಕೆ.

– ಶ್ರೀಕೃಷ್ಣ ಕುಲಕರ್ಣಿ
ಹಿರಿಯ ನಾಗರೀಕರು, ಹೊಸಪೇಟೆ.

### ಇನ್ನೂ ಪ್ರಕಾಶಿಸಲಿ



ಶತಮಾನಗಳಿಂದಲೂ ಪತ್ರಿಕೆಗಳು ಅದರಲ್ಲೂ ದಿನ ಪತ್ರಿಕೆಗಳು ಕ್ರಿಯಾಶೀಲತೆ ಮೈಗೂಡಿಸಿಕೊಂಡು ಮೌಲ್ಯಗಳೊಂದಿಗೆ ಬದುಕುತ್ತಿವೆ. ಸತ್ಯ, ಧರ್ಮ, ನ್ಯಾಯ, ನೀತಿಗಳಿಗೆ ಮುಖವಾಣಿಯಾದ ಪತ್ರಿಕೆಗಳು ಮಾತ್ರ ಇವತ್ತು ಜನಸಮುದಾಯದಲ್ಲಿ ಉಸಿರಾಡುತ್ತ ಸಾಂಘಿಕ ನೆಲೆಯಲ್ಲಿ ಬೇರೂರಿವೆ. ಇಂತಹ ಪತ್ರಿಕೆಗಳು ಬೆರಳಣಿಕೆಯಷ್ಟು ಎಂಬುದು ವಿಷಾದನೀಯ. ಈ ಬೆರಳಿಕೆಯ ಸಂಖ್ಯೆಯಲ್ಲಿ ಹಂಪಿ ಟೈಪ್ಸ್ ದಿನಪತ್ರಿಕೆಯೂ ಒಂದು ಎಂದು ಹೇಳಲು ಖುಷಿ ಎನಿಸುತ್ತಿದೆ. ಪ್ರಕಟಣೆ ಆರಂಭಿಸಿ ಕೇವಲ ಒಂದು ವರ್ಷದಲ್ಲಿ ಜನಸಮುದಾಯದ ಜೀವನಾಡಿಯಾಗಿರುವುದು ನಿಜಕ್ಕೂ ಹೆಮ್ಮೆಯ ಸಂಗತಿಯಾಗಿದೆ. ಪತ್ರಿಕೆ ಇನ್ನೂ ಪ್ರಕಾಶಿಸಲಿ ಎಂದು ಹಾರೈಸುವೆ.

– ಶಿವಾನಂದ ತಗಡೂರು
ರಾಜ್ಯಾಧ್ಯಕ್ಷರು
ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬೆಂಗಳೂರು.

### ಜನಾಶಯದೊಂದಿಗೆ ಹೆಜ್ಜೆ ಹಾಕಲಿ



ಸಂಕ್ರಮಣ ಕಾಲಘಟ್ಟದಲ್ಲಿರುವ ಮುದ್ರಣ ಮಾಧ್ಯಮಕ್ಕೆ ಹಂಪಿಟೈಮ್ಸ್ ಕಾಲಿಟ್ಟು ಒಂದು ವರ್ಷ ಪೂರೈಸಿದೆ ಎಂಬುದೇ ಸಂತಸದ ಸಂಗತಿ. ಸತ್ಯ, ನಿಷ್ಠೆ, ಪ್ರಮಾಣಿಕತೆ ಎಂಬುದೆಲ್ಲಾ ಹಳಸಲಾಗುತ್ತಿರುವ ಸಂದರ್ಭದಲ್ಲಿ ಹಂಪಿಟೈಮ್ಸ್ ದಿನ ಪತ್ರಿಕೆ ಯಾರ ಮುಲಾಜಿಗೂ, ಒತ್ತಡಕ್ಕೂ ಒಳಗಾಗದೇ ಒಂದು ವರ್ಷ ಕಳೆದಿರುವುದು ನಿಜಕ್ಕೂ ಸಾಧನೆಯೇ ಸರಿ. ಪತ್ರಿಕೆಯನ್ನು ಮುನ್ನೆಡೆಸುತ್ತಿರುವ ತಮ್ಮ ಬದ್ದತೆಯನ್ನು ಮೆಚ್ಚಲೇ ಬೇಕು. ಆರ್ಥಿಕ ತೊಂದರೆಯ ಮಧ್ಯೆಯೂ ನಿರಂತರವಾಗಿ ಹಂಪಿಟೈಮ್ಸ್ ಓದುಗರರ ಕೈ ತಲುಪಿರುವುದು ಪತ್ರಿಕೋದ್ಯಮದ ಬಗ್ಗೆ ತಮಗೆ ಇರುವ ನಿಷ್ಠೆಯೇ ಕಾರಣ. ಉತ್ತರೋತ್ತರದಲ್ಲಿ ಹಂಪಿಟೈಮ್ಸ್ ಮತ್ತಷ್ಟು ಯಶಸ್ಸು ಪಡೆಯಲಿ. ತಮ್ಮ ಸಂಸ್ಥೆ ಆರ್ಥಿಕವಾಗಿಯೂ ಸದೃಢವಾಗಲಿ ಎಂದು ಹಾರೈಸುತ್ತೇನೆ.

– ಚಂದ್ರಶೇಖರ್ ಶೃಂಗೇರಿ
ಶಿವಮೊಗ್ಗ

### ಸಾರ್ಥಕ ಸಾಧನೆ



ಒಂದು ಸ್ಥಳೀಯ ಪತ್ರಿಕೆಕಷ್ಟಪಟ್ಟರೆ ಹೇಗೆ ರಾಜ್ಯ ಮತ್ತುದೇಶದಗಡಿಯನ್ನುದಾಟಬಹುದುಎಂಬುದಕ್ಕೆದೊಡ್ಡಉದಾಹರಣೆ ಹಂಪಿ ಟೈಮ್ಸ್ ಪತ್ರಿಕೆ.ಪ್ರಾರಂಭವಾಗಿ ವರ್ಷತುಂಬುವುದರ ಒಳಗೇ ಎಪ್ಪತ್ತೈದು ಸಾವಿರದಷ್ಟು ಓದುಗರನ್ನು ಸಂಪಾದಿಸಿರುವುದು ಇದರ ಹೆಗ್ಗಳಿಕೆಯಾಗಿದೆ. ಇದಕ್ಕಾಗಿ ತನು-ಮನ-ಧನವನ್ನು ಮೀಸಲಾಗಿಟ್ಟಿರುವ ಶ್ರೀ ಬಸಾಪುರ ಬಸವರಾಜಅವರ ಶ್ರಮಪೂರ್ವಕ ನಿರ್ವಹಣೆಯೇ ಕಾರಣವಾಗಿದೆ. ನಿತ್ಯದ ಸುದ್ದಿಯೊಂದಿಗೆ ಅತ್ಯುಪಯುಕ್ತ ಮಾಹಿತಿ ನೀಡುವ ಲೇಖನಗಳು, ಅರಿವನ್ನು ವಿಸ್ತರಿಸುವ ಬರೆವಣಿಗೆಗಳು, ಹಂಪಿಯನ್ನು ಕುರಿತ ಸಂಶೋಧನ ಬರೆಹಗಳು ಮುಂತಾದವಕ್ಕೆ ಪ್ರಾಶಸ್ತ್ಯ ನೀಡಿ ಹಂಪಿ-ವಿಜಯನಗರ ಜಿಲ್ಲೆಯ ಕೀರ್ತಿಯನ್ನು ವಿಶ್ವಕ್ಕೇ ಪಸರಿಸುತ್ತಿರುವ ಹಂಪಿ ಟೈಮ್ಸ್ ಪತ್ರಿಕೆಯು ಒಂದು ವರ್ಷವನ್ನು ಪೂರೈಸುತ್ತಿರುವ ಈ ಶುಭ ಸಮಯದಲ್ಲಿ ಹೃದಯ ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

– ಡಾ.ಡಿ.ವಿ.ಪರಮಶಿವಮೂರ್ತಿ
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

### ಸಾಮಾಜಿಕ ಕಳಕಳಿಯ ಕನ್ನಡಿ



ದುರಾಳರ ಅಬ್ಬರವನ್ನು ಕುಗ್ಗಿಸುತ್ತ, ರಾಜಕೀಯ ಪಲ್ಲಟಗಳನ್ನು ವಿಶ್ಲೇಷಿಸುವ ಜತೆಗೆ ಆಡಳಿತ ಯಂತ್ರ ಪ್ರಜ್ಞೆಯೊಂದಿಗೆ ಕಾರ್ಯನಿರ್ವಹಿಸುವಂತೆ ಎಚ್ಚರಿಸುತ್ತ ಬಂದ ಹಂಪಿ ಟೈಮ್ಸ್ ಕಾರ್ಯ ಶ್ಲಾಘನೀಯ. ಸ್ಥಳೀಯ ಪತ್ರಿಕೆಯಾಗಿದ್ದರೂ ವಿಷಯ ಆಯ್ಕೆ ಹಾಗೂ ವರದಿಗಳ ನಿರೂಪಣೆಯಲ್ಲಿ ರಾಜ್ಯಮಟ್ಟದ ಪತ್ರಿಕೆಗಳ ಸರಿಗಟ್ಟಲು ಪ್ರಯತ್ನಿಸಿದ್ದು, ಮೆಚ್ಚುವಂಥದ್ದು. ತನ್ನ ಸುತ್ತಲಿನ ಸಮಾಜವನ್ನು ತಿದ್ದುವಲ್ಲಿ ಹಂಪಿ ಟೈಮ್ಸ್ ಪತ್ರಿಕೆ ಒಂದಡಿ ಮುಂದೆಯೇ ಎಂಬುದು ಯಾರಾದರೂ ಒಪ್ಪುತ್ತಾರೆ. ಕಾರಣ, ಪತ್ರಿಕೆ ರೂಪಿಸಿಕೊಂಡ ಗುಣಮಟ್ಟ! ಹೌದು, ವ್ಯಕ್ತಿಯಾಗಲಿ, ಪತ್ರಿಕೆಯಾಗಲಿ ಯಾವತ್ತೂ ಅವಗುಣಕ್ಕೆ ರಾಜಿಯಾಗಬಾರದು. ಸದಾ ವಾಸ್ತವವನ್ನು ಬಿಂಬಿಸುತ್ತ ಸಮಾಜದ ಸುಧಾರಣೆಗೆ ಎದೆಕೊಟ್ಟ ನಿಂತ ಹಂಪಿ ಟೈಮ್ಸ್ ಗೆ ಅಭಿನಂದನೆಗಳು

– ಕೆ.ರವಿಶಂಕರ, ಉದ್ಯಮಿ, ಹೊಸಪೇಟೆ

### ದಿಟ-ಸ್ಪುಟ ಸತ್ಯಕ್ಕೆ ಹತ್ತಿರ ಹಂಪಿ ಟೈಮ್ಸ್



ದಿನಬಳಕೆ ಸಾಮಾನುಗಳು ಹೆಚ್ಚಾಗುತ್ತವೆ. ದೈನಂದಿನ ಪತ್ರಿಕೆಗಳು ಇಂದು ಕಡಿಮೆಯಾಗುತ್ತಿವೆ! ಪತ್ರಿಕೆಗಳು ಜ್ಞಾನದ ಬೇರುಗಳು, ಜೀವಾಳಗಳು. ವಿಷಯ ವಸ್ತುಗಳಿಗೆ ರಾಷ್ಟ್ರೀಯ ಪತ್ರಿಕೆಗಳು ಎಷ್ಟು ಮುಖ್ಯವೋ ಸ್ಥಳೀಯ ಪತ್ರಿಕೆಗಳು ಅಷ್ಟೇ ಮುಖ್ಯ! ಜ್ಞಾನಕ್ಕೆ ಹಿರಿದು-ಕಿರಿದು ಎಂಬುದಿಲ್ಲ. ನಮ್ಮ ಈ ಭಾಗದ ಹತ್ತು ಹಲವು ದೈನಂದಿನ ಪತ್ರಿಕೆಗಳಲ್ಲಿ ಪ್ರಮುಖವಾಗಿ ಬೇಗನೇ ಪ್ರವರ್ಧಮಾನಕ್ಕೆ ಬಂದು ಬೆಳಿಗ್ಗೆ ಎಲ್ಲರ ಕೈಸೇರುತ್ತಿರುವ ಪತ್ರಿಕೆ "ಹಂಪಿ ಟೈಮ್ಸ್ " ರೋಚಕ-ವಿವೇಕಯತ ಯೋಚನಾಲಹರಿ ಹರಿವನ್ನು ಅರಿವಿನ ಕೂಪಕ್ಕೆ ಕೊಂಡೊಯ್ಯುವ ಪತ್ರಿಕೆಗಳು ವಿರಳ. ಈ ಪತ್ರಿಕೆಯ ಹೆಗ್ಗಳಿಗೆ ಅತೀ ಬೇಗನೆ ಓದುಗರನ್ನು ಆಕರ್ಷಿಸಿ ಜ್ಞಾನದ ಹಸಿವನ್ನು ನೀಗಿಸಿದ್ದು ನಿಜಕ್ಕೂ ಹೆಮ್ಮೆಯೇ ಸರಿ. ಪುಟ ನಾಲ್ಕಾದರೂ ದಿಟವಾಗಿ-ಸ್ಫುಟವಾಗಿ ಸತ್ಯಕ್ಕೆ ಹತ್ತಿರವಿರುವ ನೈಜಘಟನೆಗಳ ನಿರೂಪಣೆ, ನಿರ್ವಹಣೆ ಮೆಚ್ಚತಕ್ಕದ್ದೇ. ಯುವ ಬರಹಗಾರರಿಗೆ ಅವಕಾಶ ನೀಡಿ, ಲೇಖನಿಯಲ್ಲಿದ್ದ ಮಿದುಳಲ್ಲಿಡಗಿದ್ದ ಹತ್ತು ಹಲವು ವಿಷಯ-ವಿಚಾರಗಲೂ ಪತ್ರಿಕೆಯಲ್ಲಿ ಮೂಡಿ ಓದುಗರನ್ನು ಸೆಳೆಯುವಲ್ಲಿ ಹಂಪಿ ಟೈಮ್ಸ್ ಯಶಸ್ವಿಯಾಗಿದೆ.

ವ್ಯಕ್ತಿ-ವಿಚಾರ-ವಿಷಯ ಎಲ್ಲವನ್ನೂ ನಾಲ್ಕು ಪುಟಗಳಲ್ಲೇ ಮೂಡಿಸುವುದೆಂದರೆ ಇಡೀ ಸಾಗರದ ನೀರನ್ನು ಬಿಂದಿಗೆಯಲ್ಲಿ ತುಂಬಿದಂತೆ. ಆ ಕೆಲಸವನ್ನು "ಹಂಪಿ ಟೈಮ್ಸ್" ಮಾಡುತ್ತಿದೆ. ಈ ಪತ್ರಿಕೆ ಪ್ರಕಟವಾಗುತ್ತ 1 ವರ್ಷ ಯಶಸ್ವಿಯಾಗಿ ಪೂರ್ಣಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಪತ್ರಿಕೆಯ ಸಂಪಾದಕ ಮಂಡಳಿ, ಅಂಕಣಕಾರರಿಗೆ ತುಂಬು ಹೃದಯದ ಹಾರ್ದಿಕ ಅಭಿನಂದನೆಗಳು. ನಿಮ್ಮ ಮುಂದಿನ ಯೋಜನೆಗಳು ಯಶಸ್ವಿಯಾಗಿ, ವಿದ್ಯಾರ್ಥಿಗಳು, ರೈತರು, ವರ್ತಕರು, ಯೋಧರು ಸಮಾಜದ ಎಲ್ಲಾ ವರ್ಗದ ಓದುಗರ ಮನ ಮುಟ್ಟಲಿ, ಜ್ಞಾನದ ಹರಿವು ಅರಿವು ಹೆಚ್ಚಾಗಲಿ. ಮತ್ತೊಮ್ಮೆ ಪತ್ರಿಕಾ ಬಳಗಕ್ಕೆ ಅಭಿನಂದನೆಗಳು

– ಡಾ.ಎಚ್.ಎಂ. ಚಂದ್ರಶೇಖರ ಶಾಸ್ತ್ರೀ
ವಿಶ್ರಾಂತ ಇತಿಹಾಸ ಪ್ರಾಧ್ಯಾಪಕರು, ವಿಜಯನಗರ ಕಾಲೇಜ್,
ಹೊಸಪೇಟೆ.

### ಜನಾಶಯದೊಂದಿಗೆ ಹೆಜ್ಜೆ ಹಾಕಲಿ



**ಭಾರತಕ್ಕೆ ವಿಜಯನಗರ ಸಾಮ್ರಾಜ್ಯದ ಕೊಡುಗೆ ಅತ್ಯಮೂಲ್ಯ. ವಿಶ್ವದ ಇತರೆ ಯಾವುದೇ ನೆಲಕ್ಕಿಂತ ಕಮ್ಮಿ ಎನಿಸದಂತೆ ಮಹತ್ವ ಪಡೆದ ಈ ನೆಲ ವಜ್ರ, ವೈಡೂರ್ಯ, ಬಂಗಾರ, ಬೆಳ್ಳಿ ಶೇರುಗಟ್ಟಲೆ, ಕೇಜಿಗಟ್ಟಲೆ ಅಳೆದು, ತೂಗಿದ್ದು ಕಂಡಿದ್ದು, ಅದೀಗ ಇತಿಹಾಸ. ಈ ಬಗೆಯ ಚಾರಿತ್ರಿಕ ಪರಿಸರದಲ್ಲಿ ಜನ್ಮ ತೆಳೆದ ಹಂಪಿಟೈಮ್ಸ್ ಗೆ ಒಂದು ವರ್ಷ ! ಜನಪರ ಕಾಳಜಿಯೊಂದಿಗೆ ಅಡಿ ಇಟ್ಟ ಪತ್ರಿಕೆ ಒಂದು ವರ್ಷ ತುಂಬಿ ಮುನ್ನುಗ್ಗುತ್ತಿರುವುದು ಸಂತಸ ತಂದಿದೆ. ಪತ್ರಿಕೆ ಸದಾ ಜನಾಶಯದೊಂದಿಗೆ ಹೆಜ್ಜೆ ಹಾಕಲಿ ಎಂದು ಆಶಿಸುವೆ.**

– ಪಿ.ಸತ್ಯನಾರಾಯಣ
ಜಿಲ್ಲಾಧ್ಯಕ್ಷರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ,
ವಿಜಯನಗರ ಜಿಲ್ಲೆ

### ವಿದ್ವತ್ಪೂರ್ಣ ಲೇಖನಗಳು



ಹಂಪಿ ಟೈಮ್ಸ್ ಪತ್ರಿಕೆ ಯನ್ನು ನಾನು ದಿನಾಲೂ ಓದುತ್ತಿದ್ದೇನೆ. ತುಂಬ ಮಹತ್ವಪೂರ್ಣವಾದ ಲೇಖನಗಳನ್ನು ಓದುಗರಿಗೆ ಉಣಬಡಿಸುತ್ತಿದ್ದೀರಿ. ಅಲ್ಲದೆ ದಿನನಿತ್ಯ ಹೊಸಪೇಟೆ ಸುತ್ತಮುತ್ತ ನಡೆಯುವ ಆಗು ಹೋಗುಗಳನ್ನು ಬಿತ್ತರಿಸುತ್ತ. ವಿಜಯನಗರ ಜಿಲ್ಲೆ ಬೆಳೆಯುವುದಕ್ಕೆ ಜನಸಾಮಾನ್ಯರು ಮತ್ತು ಜಿಲ್ಲಾಡಳಿತದ ಜೊತೆ ಸಂಪರ್ಕದ ಕೊಂಡಿಯಂತೆ ಹಂಪಿ ಟೈಮ್ಸ್ ಪತ್ರಿಕೆ ಕೆಲಸ ಮಾಡುತ್ತಿದೆ. ಒಳ್ಳೊಳ್ಳೆ ವಿದ್ವಾಂಸರಿಂದ ವಿದ್ವತ್ಪೂರ್ಣ ಲೇಖನಗಳನ್ನು ಬರೆಸಿ ಪ್ರಕಟಿಸುವ ಮೂಲಕ ಜನರಿಗೆ ತಲುಪಿಸಿದ್ದೀರಿ. ಪತ್ರಿಕೆ ಇನ್ನು ಹೆಚ್ಚು ಪ್ರಚಲಿತಕ್ಕೆ ಬರಲಿ ಎಂದು ಆಶಿಸುತ್ತೇನೆ.

– ಎ.ಎಂ.ಕೃಪಾಶಂಕರ್, ಕುಲಪತಿಗಳ ಆಪ್ತಕಾರ್ಯದರ್ಶಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ

### ಪತ್ರಿಕೆಗಳಿಗೆ ಯಾವತ್ತೂ ಸಾವಿಲ್ಲ



ಹೊಸ ತಂತ್ರಜ್ಞಾನದ ವಿದ್ಯುನ್ಮಾನ ಮಾಧ್ಯಮ ಮಧ್ಯೆ ಮುದ್ರಣ ಮಾಧ್ಯಮ ಕಳೆಗುಂದುತ್ತಿದೆ, ಇನ್ನಷ್ಟು ವರ್ಷಗಳಲ್ಲಿ ಕಳೆದೂ ಹೋಗುತ್ತದೆ ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಇತ್ತೀಚೆಗೆ ಕೇಳಿ ಬರುತ್ತಿರುವೆ. ಆದರೆ, ಪ್ರಸಾರ ಸಂಖ್ಯೆ ಇಳಿಯಬಹುದೆ ಹೊರತು ಪತ್ರಿಕೆಗಳಿಗೆ ಯಾವತ್ತೂ ಸಾವಿಲ್ಲ. ಶಾಸಕಾಂಗದ ನಾಲ್ಕನೇ ಅಂಗದಂತೆ ಕಾರ್ಯ ನಿರ್ವಹಿಸುತ್ತಿರುವ ಪತ್ರಿಕೆಗಳು ಇರುವ ಕಾರಣಕ್ಕೆ ಒಂದಿಷ್ಟು, ಬದ್ಧತೆ, ನ್ಯಾಯ, ಮಾನವೀಯತೆ ಉಳಿದಿದೆ ಎನ್ನಬಹುದು. ವ್ಯವಸ್ಥೆಯನ್ನು ನಿದ್ದೆಗೆ ಜಾರದಂತೆ ಸದಾ ಎಚ್ಚರದಲ್ಲಿರುವಂತೆ ಜಾಗೂರಕತೆ ಮೂಡಿಸುವ ಪತ್ರಿಕೆಗಳಲ್ಲಿ ಒಂದಾದ ಹಂಪಿ ಟೈಮ್ಸ್ ವರ್ಷಾಚರಣೆಯ ಹೊಸ್ತಿಲಲ್ಲಿರುವುದು ಸಂತಸ ತಂದಿದೆ. ಶುಭವಾಗಲಿ ಪತ್ರಿಕೆಗೆ.

ಶ್ರೀಮತಿ ಸರಳಾ ವೆಂಕಟೇಶ, ಶಿಕ್ಷಕಿ, ಹೊಸಪೇಟೆ

### ಕೊರತೆ ನಿಗಿಸಿ, ಅಸ್ತಿತ್ವ ಸ್ಥಾಪಿಸಿದೆ




ಹಂಪಿ ಟೈಮ್ಸ್ ದಿನ ಪತ್ರಿಕೆ ಆರಂಭವಾಗಿ ವರ್ಷಪೂರ್ಣಗೊಂಡಿದೆ ಹರ್ಷ ಮಾತ್ರ ಇನ್ನು ಹಚ್ಚ ಹಸಿರಾಗಿಯೆ ಇದೆ. ಈ ಹರ್ಷ ನಿರಂತರವಾಗಿರಲಿ ಸ್ಥಳೀಯರ ನೋವು ನಲಿವುಗಳಿಗೆ ಕೈಗನ್ನಡಿಯಾಗಿರಲಿ ಎಂದು ಮನ:ಪೂರ್ತಿ ಹಾರೈಸುವೆ.

ಮುದ್ರಣಾ ಮಾಧ್ಯಮ ತನ್ನ ಮಹತ್ವ ಕಳೆದುಕೊಂಡಿದೆ ಎನ್ನುವುದು ಶುದ್ಧ ಸುಳ್ಳು, ಬದಲಾದ ಜಾಗತಿಕ ಬದಲಾವಣೆಗೆ ನಮ್ಮನು ನಾವು ಬದಲಾಯಿಸಿಕೊಳ್ಳದೆ ವ್ಯವಸ್ಥೆಯನ್ನು ದೂರುತ್ತಾ ಸಾಗುತ್ತಿರುವ ನಾವು ಹಿಂದೆಯೇ ಉಳಿಯುತ್ತೇವೆ, ಬದಲಾವಣೆಗಳನ್ನು ಮೈಗೂಡಿಸಿಕೊಂಡು ಕ್ರಿಯಾಶೀಲವಾಗಿ ಮುನ್ನಡೆಯುವ ಮೂಲಕ ತನ್ನ ಅಸ್ತಿತ್ವವನ್ನು ಸ್ಥಾಪಿಸಬಹುದು ಎನ್ನುವುದಕ್ಕೆ ಹಂಪಿ ಟೈಮ್ಸ್ ಸಾಕ್ಷಿಯಾಗಿದೆ ಎಂದು ಹೇಳಲು ಸಂತಸವೆನಿಸುತ್ತದೆ. ಇಂದು ಜಗತ್ತಿನ ಯಾವುದೆ ಭಾಗದ ಸುದ್ಧಿಯನ್ನು ನಮ್ಮ ಬೆರಳ ತುದಿಯಲ್ಲಿಯೇ ತಿಳಿಯಬಹುದು, ಆದರೆ ನಮ್ಮ ಸ್ಥಳೀಯ ಸುದ್ಧಿಗಳಿಗೆ ಮಹತ್ವವಿಲ್ಲದಾಗಿರುವ ಈ ಸಂದರ್ಭದಲ್ಲಿ ಹಂಪಿ ಟೈಮ್ಸ್ ಕೊರತೆಯನ್ನು ನಿಗಿಸುವ ಕಾರ್ಯವನ್ನು ಸಮರ್ಥವಾಗಿ ನಿಭಾಯಿಸುತ್ತಿದೆ ಆ ಮೂಲಕ ಸ್ಥಳೀಯ ಪತ್ರಿಕೆಯ ಮಹತ್ವವನ್ನು ಎತ್ತಿಹಿಡಿದಿದೆ ಎಂದು ಹೇಳಲು ಹರ್ಷವೆನಿಸುತ್ತಿದೆ.

ಇದು ಹೀಗೆ ಮುಂದುವರೆಯಲಿ, ಸ್ಥಳೀಯ ಕಲಾವಿದರಿಗೆ, ಸ್ಥಳೀಯ ಪ್ರತಿಭೆಗಳಿಗೆ ಸ್ಥಳೀಯವಾಗಿ ಜ್ಞಾನ ಭಂಡಾರವನ್ನು ಹೊಂದಿದ ಬರಹಗಾರರಿಗೆ ವೇದಿಕೆಯಾಗಿ ಪ್ರತಿಭಾ ಪ್ರದರ್ಶನದ ವೇದಿಕೆಯಾಗಿ ಮುನ್ನಡೆಯಲಿ ಎಂದು ಹಾರೈಸುವೆ.

– ಅನಂತ ಜೋಶಿ, ಪತ್ರಕರ್ತ ಹೊಸಪೇಟೆ.

### ಮತ್ತಷ್ಟುಸಮೃದ್ಧತೆಮೈಗೂಡಿಸಿಕೊಳ್ಳಲಿ



ವರ್ಷದ ಹಿಂದಷ್ಟೇ ಹುಟ್ಟಿದ ಹಂಪಿ ಟೈಮ್ಸ್ ಪತ್ರಿಕೆ ತನ್ನ ಕಾರ್ಯಮುಖೇನ ಯಶಸ್ಸು ಕಂಡು ಇಂದು ನಿಖರ ಗುರಿಯತ್ತ ಸಾಗಿದ್ದು ಸತ್ಯ ಸಂಗತಿ.

ಪತ್ರಿಕೆ ಆರಂಭದಿಂದಲೂ ಕ್ರಿಯಾಶೀಲ ಚಟುವಟಿಕೆಗಳೊಂದಿಗೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವುದರ ಜೊತೆಗೆ ಓದುಗರ ಸಂಖ್ಯೆಯನ್ನೂ ಗಣನೀಯವಾಗಿ ವೃದ್ಧಿಸಿಕೊಂಡಿದೆ.

ಹೊಸ ಹೊಸ ಆಲೋಚನೆಗ ಳೊಂದಿಗೆ ಪತ್ರಿಕೆ ಮತ್ತಷ್ಟು ಸಮೃದ್ಧತೆ ಮೈಗೂಡಿಸಿ ಕೊಳ್ಳಲಿ.

– ಡಾ.ರಾಜು ಕುಲಕರ್ಣಿ, ಹೊಸಪೇಟೆ

### ಬರವಣಿಗೆಯ ಕೌಶಲ ಅನಾವರಣಗೊಳಿಸುವ ಅವಕಾಶ



ನಮ್ಮ ಜಿಲ್ಲೆಯ ಪತ್ರಿಕೆಯಾದ, 'ಹಂಪಿ ಟೈಮ್ಸ್' ಬಗ್ಗೆ ಗೊತ್ತಾದ ಸಮಯವೇ, 2023ರ ಕೃಷ್ಣ ಜನ್ಮಾಷ್ಟಮಿಯ ಸಮಯದಲ್ಲಿ. ಗೆಳತಿಯೊಬ್ಬರು, ಅವರ ಕೃಷ್ಣಾಂಲಂಕೃತ ಮಗುವಿನ ಫೋಟೋವನ್ನು ಪತ್ರಿಕೆಯಲ್ಲಿ ನೋಡಿದಾಗಲೇ, 'ಹಂಪಿ ಟೈಮ್ಸ್ ' ಪತ್ರಿಕೆಯು ನಮ್ಮ ಜಿಲ್ಲೆಯ ಪತ್ರಿಕೆ'ಎಂದು ತಿಳಿಯಿತು. ನಂತರ ಅಂತರ್ಜಾಲದಲ್ಲಿ ಹುಡುಕಿದಾಗ, ಪತ್ರಿಕೆ ಓದಲು ಸಿಕ್ಕು ಅನಿಸಿದ್ದು, ಸ್ಥಳಿಯ ಸಮಾಚಾರಗಳ ಜೊತೆ, ಅಂಕಣ ಬರಹಗಳು, ಸ್ಥಳಿಯ ಇತಿಹಾಸ ಅಂದರೆ, ನಮಗೆ ಇದುವರೆಗೂ ತಿಳಿದೇ ಇರದ ಹಂಪಿಯ ಒಳನೋಟದ ಬಗೆಗೆ, ಇತಿಹಾಸದಲ್ಲಿ ಸೇರಿಹೋದ ದೇವತಾ ಆರಾಧನೆಗಳ ಬಗೆಗಿನ ಲೇಖನಗಳಿಂದ, 'ಪತ್ರಿಕೆಯ ತೂಕ' ಹೆಚ್ಚಿರುವುದು ಗೊತ್ತಾಯಿತು. 'ನಮ್ಮ ಜಿಲ್ಲೆಯ ಪತ್ರಿಕೆಯಲ್ಲಿ, ನಾನ್ ಸಹ ಬರೆಯಬಹುದಲ್ವಾ!' ಎಂದೆನಿಸಿ ಇಲ್ಲಿ ಬರೆದ ಮೊದಲ ಲೇಖನವೇ, ನಮ್ಮೂರ ಹೆಮ್ಮೆಯ ಪಕ್ಷಿಧಾಮದದ ಬಗ್ಗೆ. ಒಂದು ದಿನದ ಕಾಯುವಿಕೆ ಕಳೆದು, ಅದನ್ನು ಪತ್ರಿಕೆಯಲ್ಲಿ ನೋಡಿದಾಗಲಂತೂ ಅಭಿಮಾನ ಹೆಚ್ಚಿತು.

ವಿಜಯನಗರದ ಹೆಮ್ಮೆ 'ಹಂಪಿ ಟೈಮ್ಸ್ ' ಪತ್ರಿಕೆಯಿಂದ ನಮ್ಮ ಜಿಲ್ಲೆಯಲ್ಲಿನ ಹಲವು ಊರು- ತಾಲೂಕಿನ ಹಲವಾರು ಬರಹಗಾರರಿಗೆ, ಲೇಖಕರಿಗೆ, ವಿದ್ಯಾರ್ಥಿಗಳಿಗೆ, ಅಧ್ಯಾಪಕರು, ಶಿಕ್ಷಕರಿಗೆ, ಗೃಹಿಣಿಯರಿಗೆ, ಹವ್ಯಾಸಿ ಬರಹಗಾರರ ಬರಹ, ಲೇಖನ, ಕಥೆ – ಕವನ, ಅಂಕಣ ಬರಹಗಳನ್ನು ಪ್ರೋತ್ಸಾಹಿಸುವ, ಸೂಕ್ತ ವೇದಿಕೆ ಈ ಪತ್ರಿಕೆಯೊಂದರ ಮೂಲಕ ಸಿಕ್ಕಿದೆ ಎಂದರೂ ಅತಿಶಯೋಕ್ತಿ ಆಗಲಾರದು.

ಪತ್ರಿಕೆಗೆ ಬರೆಯುವ ಪ್ರತಿಯೊಬ್ಬರನ್ನು, ಯಾವುದೇ ಪೂರ್ವಾಗ್ರಹಕ್ಕೆ ಒಳಗಾಗದೇ/ ಒಳಪಡಿಸದೇ, ಪ್ರತಿಯೊಬ್ಬರನ್ನು ಸಮಾನವಾಗಿ ಪ್ರೋತ್ರಾಹಿಸುವುದು ಸುಮ್ಮನೇ ಮಾತಲ್ಲ. ಅದು ಹಂಪಿ ಟೈಮ್ಸ್ ಪತ್ರಿಕೆ ಬಳಗಕ್ಕಿರುವ ಸಾಹಿತ್ಯಾಭಿಮಾನನನ್ನು, ಪ್ರತಿಯೊಬ್ಬರನ್ನು ಬೆಳೆಸುವಿಕೆಯನ್ನು ತೋರಿಸುತ್ತಿದೆ.

ನಾನು ಮೊದಲೆಲ್ಲಾ, ನನ್ನ ನೆಚ್ಚಿನ ಲೇಖಕರಾದ ಶ್ರೀ ರಹಮತ್ ತರೀಕೆರೆ ಸರ್ ಅವರ ಬ್ಲಾಗ್‌ಗಳನ್ನು, ಅವರು ಮನೆ ಕಟ್ಟಿಸುವಾಗಿನ ಸಂದರ್ಭಗಳ ಘಟನೆಗಳು, ಶಿವಮೊಗ್ಗದಲ್ಲಿ ಕಳೆದಂತಹ ಬಾಲ್ಯದ ದಿನಗಳು, ಜನಸಾಮಾನ್ಯರ ದೈನಂದಿನ ಬದುಕು ತೆರೆದಿಡುವ ಹಲವಾರು ಬರಹಗಳನ್ನು "ಅವಧಿ" ಈ ಮ್ಯಾಗಝಿನ್ ನಲ್ಲಿ ಓದಿದ್ದೆ. ಆದರೀಗ ರಹಮತ್ ಸರ್ ಲೇಖನಗಳು, ನಮ್ಮ ಹಂಪಿ ಟೈಮ್ಸ್ ಪತ್ರಿಕೆಯಲ್ಲಿ ಸಿಗುತ್ತಿರುವುದು ಸಂತಸವೇ ಆಗುತ್ತಿದೆ. ಇತಿಹಾಸ, ಐತಿಹಾಸಿಕ ಸಂಶೋಧನಗಳಿಗೆ ಸಂಬಂಧಿಸಿದಂತೆ, ಕನ್ನಡ ನಾಡಿನ ಹೆಮ್ಮೆಯ ಹಂಪಿ ವಿ.ವಿ.ಯ ಕುಲಪತಿಗಳಾದ ಶ್ರೀ ಪರಮಶಿನ ಮೂರ್ತಿ ಸರ್ ಅವರ ಲೇಖನಗಳಿಂದ, ಶಾಸನಗಳ ಸಂಶೋಧನೆ, ವಿಜಯನಗರ ಸಾಮ್ರಾಜ್ಯದ ವಿಗ್ರಹ/ದೇವತೆ ಆರಾಧನೆ, ಒಳಸುಳಿವು ವಿಷಯಗಳನ್ನು ಓದಿದಾಗ, 'ಹೀಗೂ ಇತ್ತು' ಎಂದು ಅಚ್ಚರಿಯಾಗದೇ ಇರದು. ಅದರಂತೆ ರಾಜಶೇಖರ್ ಜಮದಂಡಿ ಸರ್ ಅವರ ಬರಹಗಳು, ಹಂಪಿ & ಹಂಪಿ ಸುತ್ತಲಿನ ಪ್ರದೇಶದ ವೀರಭದ್ರೇಶ್ವರ ಆರಾಧನೆ ಓದಿದಾಗ, ಹೌದಲ್ವಾ! ಇದುವರೆಗೂ ಇದರ ಬಗ್ಗೆ ಗಮನವೇ ಹೋಗಿರಲಿಲ್ಲ ಎಂದೆನಿಸಿತು. ಹೌದು. ಜೊತೆಗೆ 'ಮಧುರ ವಿಜಯಂ' ಬರಹ, ಕೃತಿಯ ಬಗ್ಗೆ ತಿಳಿಸಿಕೊಟ್ಟಿದೆ. ಅದರಂತೆ, ಶಿಕ್ಷಕರಾದ ಶ್ರೀ ಪರಮೇಶ್ವರಯ್ಯ ಸೊಪ್ಪಿನಮಠ ಸರ್ ಅವರ ಶೈಕ್ಷಣಿಕ ಲೇಖನಗಳು, ಮಕ್ಕಳ ಮನೋವಿಜ್ಞಾನದ ಬರಹಗಳು ಪೋಷಕರಿಗೆ ಸಹಾಯಕವಾಗುತ್ತಿವೆ. ಬೆಳವಣಿಗೆಗೆ ಕೈಪಿಡಿಯಂತಿವೆ. 'ದೈನಂದಿನ ವಿಜ್ಞಾನ'ದ ಲೇಖನಗಳು ಅಚ್ಚರಿಗೆ ದೂಡುತ್ತಿವೆ. ಹೀಗೆ ಹತ್ತು ಹಲವು ರೀತಿಯ ವಿಶೇಷ ಉಪಯುಕ್ತ ಬರಹ, ಲೇಖನಗಳಿಂದ "ಹಂಪಿ ಟೈಮ್ಸ್" ವಿಭಿನ್ನವಾಗಿ ಹೊರಹೊಮ್ಮಿ ಮುನ್ನಡೆಯುತ್ತಿದೆ. ಜೊತೆಗೆ ದಾರಿದೀಪವಾಗುವಂತಹ ಬೆಳಕಿನ ಹಾದಿ ಕಥೆಗಳು, ಮಲೆನಾಡ ಚಿತ್ರಣಗಳು, ಕವಿಮನದ ಕವನಗಳಿಂದ ಓದುಗರನ್ನು ತನ್ನಡೆ ಸೆಳೆದು, ಸರಾಗವಾಗಿ ಓದಿಸಿಕೊಂಡು ಹೋಗುತ್ತಿದೆ ಹಂಪಿ ಟೈಮ್ಸ್ ಪತ್ರಿಕೆ. ಹಾಗಾಗಿಯೇ, ಬರಹಗಾರರಂತೆ, ಓದುಗರು ಅಷ್ಟೇ ಮುಖ್ಯ. ಕೃತಿ-ಕಾದಂಬರಿಯಾಗಲಿ ಓದುಗರಿಲ್ಲದೇ ಪುಸ್ತಕವಾದರೂ ಜೀವಂತಿಕೆ-ಅಸ್ತಿತ್ವಯಿಲ್ಲ. ನನ್ನ ಅಭಿಪ್ರಾಯದಂತೆ ಎಲ್ಲಾ ವರ್ಗದ ಬರಹಗಾರರ ಬರಹಗಳು ಅಂದರೆ, ಲಘು ಬರಹ, ಬ್ಲಾಗ್ ಬರಹಗಳಿಗೆ, ಕಥೆ, ಸಿರೀಸ್, ನ್ಯಾನೋ ಕಥೆ, ಐತಿಹಾಸಿಕ, ನ್ಯಾನೋ ಅಭಿಪ್ರಾಯದ ಬರಹಗಳು ಯಾವುದೇ ಪ್ರಾಕಾರವಿರಲಿ, ಅವುಗಳಿಗೆ ನೀಡುವ ಪ್ರೋತ್ಸಾಹದಿಂದ ಇಲ್ಲಿ ಬರೆಯಲು ನಮಗೆ ಪ್ರೇರಣೆಯಾಗುತ್ತಿದೆ ಎಂದರೆ ಅತಿಶಯವಲ್ಲವಷ್ಟೇ. ಮುಖ್ಯವಾಗಿ ಇಲ್ಲಿ (ಗ್ರಾಮಾಂತರ ಪ್ರದೇಶದ) ವಿದ್ಯಾರ್ಥಿಗಳ ಪ್ರಬುದ್ಧ ಕಥೆ-ಬರಹಗಳನ್ನು ನೋಡಿದಾಗ, ಅವರ ಬರವಣಿಯ ಕೌಶಲ ಅನಾವರಣಗೊಳಿಸುವ ಅವಕಾಶವಾಗಿದೆ ಎನಿಸಿದೆ.

ನಮ್ಮ ಪಾರಂಪರಿಕ 'ಹಂಪಿ' ಹೆಸರೇ, ಅನೇಕ ದೇವಾಲಯ, ಶಾಸನಗಳು, ಕಥೆ ಹೇಳುವ ಭಗ್ನ ಮೂರ್ತಿಗಳೇ ತಟ್ಟನೇ ಕಣ್ಮುಂದೆ ಬರುವಂತೆ ಮಾಡುತ್ತಿದೆ. ಈಗ, ಹಂಪಿ ಜೊತೆಗೆ, 'ಹಂಪಿ ಟೈಮ್ಸ್' ಪತ್ರಿಕೆಯೂ ಕಣ್ಮುಂದೆ ಬರುತ್ತಿದೆ.

ವೈಭವದ ವಿಜಯನಗರದ ರಾಜಧಾನಿ ಹಂಪಿ ವಿಶ್ವವಿಖ್ಯಾತವಾಗಿದ್ದಂತೆ, ವಿಜಯನಗರ ಜಿಲ್ಲೆಯ, "ಹಂಪಿ ಟೈಮ್ಸ್" ಪತ್ರಿಕೆ, ಇನ್ನೂ ಸಹ ಎಲ್ಲಾ ಕಡೆಯ ಕನ್ನಡಿಗರಿಗೆ ತಲುಪಿ, ತನ್ನ ಅಕ್ಷರ ಕಂಪಿನ ನಿನಾದ ಹರಡಲಿ ಎಂಬುದೇ ನಮ್ಮ ಸದಾಶಯ. ಪತ್ರಿಕಾ ಬಳಗಕ್ಕೆ, ಬರಹಗಾರರಿಗೂ, ಓದುಗರಿಗೂ ಪತ್ರಿಕೆಯ ವಾರ್ಷಿಕೋತ್ಸವದ ಶುಭಾಶಯಗಳು ಅಭಿನಂದನೆಗಳು.

– ಲೀಲಾವತಿ ವಿಜಯಕುಮಾರ, ಅಂಕಸಮುದ್ರ,
ವಿಜಯನಗರ ಜಿಲ್ಲೆ